ISSN-2454-678X
ಸಂಪುಟ–5, ಸಂಚಿಕೆ–1, ಜನವರಿ 01, 2018 ರಿಂದ ಪೆಬ್ರುವರಿ 15, 2018

1

# ದಲಿತ ಬಂಡಾಯದ ಗಟ್ಟಿ ಧ್ವನಿ–ಸಿದ್ಧಲಿಂಗಯ್ಯ

* **ಡಾ.ಎಸ್.ಬಿ.ಚನ್ನಗೌಡ್ರ.** ಎಂ.ಎ

"ಲೇಖನಿ ಖಡ್ಗಕ್ಕಿಂತ ಹರಿತ" ಎಂಬ ಮಾತಿನ ಹಿನ್ನಲೆಯಲ್ಲಿ ಕಾವ್ಯಗಳನ್ನೆ ಖಡ್ಗವಾಗಿಸಿಕೊಂಡು ದಲಿತ ಸಾಹಿತ್ಯ ಬೆಳವಣಿಗೆ ಪಡೆಯಿತು. ಸಾಮಾಜಿಕವಾಗಿ ತುಳಿತಕ್ಕೆ ಒಳಗಾದ ಕೆಳಜಾತಿಯ ಜನರು ರಚಿಸಿದ ವಿಮೋಚನೆ ಸಾಹಿತ್ಯವೇ ದಲಿತ ಸಾಹಿತ್ಯ. ದಲಿತ ಕವಿ ಎಂದೇ ಪ್ರಸಿದ್ದವಾಗಿರುವ ಸಿದ್ಧಲಿಂಗಯ್ಯ ರೋಷಾವೇಶದ ಹಾಡುಗಳ ಕವಿ, ಮೆದು ಮಾತಿನ ವಾಮನಮೂರ್ತಿ ಸಿದ್ಧಲಿಂಗಯ್ಯನವರನ್ನ ಪ್ರತ್ಯಕ್ಷವಾಗಿ ನೋಡಿದಾಗ ನಿಜವಾಗಲೂ ಇವರೇ ಸಿದ್ಧಲಿಂಗಯ್ಯನವರಾ? ಎಂಬ ಅನುಮಾನ ಹುಟ್ಟುತ್ತದೆ. ಏಕೆಂದರೆ ಕವಿಗಳ ಆಕಾರ ಹಾಗಿತ್ತು, ಆದರೆ ಅವರ ಹಾಡುಗಳ ರೋಷಾ ವೇಷ ಇಕ್ರಲಾ ವದೀರ್ಲಾ ಅನ್ನುವ ಕೆಚ್ಚನ್ನು ಕಂಡವರಿಗೆ ಅವರ ನಿಜಸ್ವರೂಪ ಗೊತ್ತಾಗುತ್ತದೆ. ಸಿದ್ಧಲಿಂಗಯ್ಯ ಅವರು ಒಮ್ಮೆ "ದಲಿತರಿಗೆ ಪ್ರತ್ಯೇಕ ರಾಜ್ಯ ಕೊಡಿ" ಅಂತ ಆಗ್ರಹ ಮಾಡಿದಾಗ ದೇವನೂರು ಮಹಾದೇವವರು ಯಾರಪ್ಪ ಈ ಮಹಾನುಬಾವ ಅಂತ ಇವರನ್ನು ನೋಡಲು ಕಾದಿದ್ದರಂತೆ. ಸಿದ್ಧಲಿಂಗಯ್ಯನವರ ಬಾಹ್ಯಸ್ವರೂಪ ನೋಡಿ ಆಶ್ಚರ್ಯವಾಗುವುದಿರಲಿ, ಹೊಲೆಮಾದಿಗರ ಹಾಡು ಸಂಕಲನದ ಹಾಡುಗಳನ್ನು ಬರೆದದ್ದು ಪಿ.ಯು.ಸಿ ಯಲ್ಲಿದ್ದಾಗ ಎಂಬುದು ಇನ್ನೂ ಆಶ್ಚರ್ಯಕರವಾಗಿದೆ.

ಸಿದ್ಧಲಿಂಗಯ್ಯನವರು "ಗ್ರಾಮದೇವತೆಗಳು" ಎಂಬ ಮಾಹಾ ಪ್ರಬಂದ ಮಂಡಿಸಿ ಪಿ.ಹೆಚ್.ಡಿ ಪಡೆದರು. "ಊರು ಕೇರಿ" ಅವರ ಆತ್ಮಕಥೆ "ಇಕ್ರಲಾ ವದಿಲ್ರಾ" "ದಲಿತರು ಬರುವರು ದಾರಿಬಿಡಿ" ಎಂಬ ಹೋರಾಟದ ಗೀತೆಗಳನ್ನು ರಚಿಸಿ ಜನಮಾನಸದಲ್ಲಿ ಚಿರಸ್ಥಾಯಿ ಆದರು. ಸಿದ್ಧಲಿಂಗಯ್ಯ ಕನ್ನಡ ಕಾವ್ಯದ ನುಡಿಗಟ್ಟನ್ನೆ ಬದಲಿಸಿದರು ಆರಂಭದಲ್ಲಿ ಇಡೀ ಸಾರಸ್ವತ ಲೋಕ ಆಗ ಹೇಗೆ ತಬ್ಬಿಬ್ಬಾಯಿತು ಎನ್ನಲು ಇಲ್ಲಿ ಒಂದು ಪ್ರಸಂಗವನ್ನು ಹೇಳಬಹುದು. ಸಿದ್ಧಲಿಂಗಯ್ಯನವರ ಹೊಲೆಮಾದಿಗರ ಹಾಡು ಸಂಕಲನ ಹೊರತರುವ ಹೊಸ್ತಿಲಲ್ಲಿ ಶೂದ್ರ ಶ್ರೀನಿವಾಸ ಅಗ್ರಹಾರ ಕೃಷ್ಣಮೂರ್ತಿ ಲಂಕೇಶರ ಬಳಿಹೋಗಿ ಆ ಸಂಕಲನಕ್ಕೆ ಮುನ್ನುಡಿ ಬರೆದುಕೊಡುವಂತೆ ಕೇಳಿದರು ಆದರೆ ಅದನ್ನು ಓದಿದ ಲಂಕೇಶರು ಇದು ಕಾವ್ಯವಲ್ಲ ಹಾಗಾಗಿ ನಾನು ಮುನ್ನುಡಿ ಬರೆಯುವುದಿಲ್ಲ ಎಂದರಂತೆ ಅಂದರೆ ಲಂಕೇಶರಂಥಹ ಮೇದಾವಿಗೂ ಒಬ್ಬ ಜನಕವಿಯ ಹುಟ್ಟನ್ನು ಕಾಣುವ ಕಣ್ಣು

---

* **ಮುಖ್ಯಸ್ಥರು ಕನ್ನಡ ವಿಭಾಗ, ಪ್ರಾಂಶುಪಾಲರು ಬಿ.ಆರ್.ತಂಬಾಕದ ಪ್ರಥಮ ದರ್ಜೆ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ ಹಿರೇಕೆರೂರು. ಜಂಗಮವಾಣಿ – 9448789390.**

ಲಭಿಸಿರಲಿಲ್ಲ ಆದರೆ ಸಿದ್ಧಲಿಂಗಯ್ಯ ಇತಿಹಾಸ ಸೃಷ್ಟಿಸಿದರು. ಕನ್ನಡದಲ್ಲಿ ಕುವೆಂಪು ನಂತರ ಸಾವಿರಾರು ಜನರ ಕೊರಳ ಹಾಡಾಗಿ ಹೊಮ್ಮಿದ್ದು ಸಿದ್ಧಲಿಂಗಯ್ಯನವರ ರಚನೆಗಳೇ ಸಿದ್ಧಲಿಂಗಯ್ಯನವರ ಶೈಲಿ ಅನುಕರಿಸಿದವರು ನೂರಾರು ಮಂದಿ ಇದ್ದಾರೆ ಆದರೆ ಅವರ ಹಾಗೆ ಯುಗದ ಯಾತನೆಗೆ ಬಾಯಿ ಕೊಟ್ಟ ಕವಿಗಳು ತೀರಾ ಕಡಿಮೆ. ಭುವಿಯ ಕೆಚ್ಚು, ಮುಗಿಲಮಿಂಚು ಒಂದುಗೂಡಿ ಕಾವ್ಯವಾಗಿ ಹರಿದಂತೆ ಸಿದ್ಧಲಿಂಗಯ್ಯನವರ ಪ್ರತಿಭೆ.

ಶತ–ಶತಮಾನ ಅಂತರಾಳದಲ್ಲಿ ಹುದುಗಿದ್ದ ನಿರಾಶೆಗಳನ್ನು ಅಕ್ಷರಕ್ರಾಂತಿಯ ಪ್ರಭಾವದಿಂದ ಅಕ್ಷರರೂಪಕ್ಕಿಳಿದಿದ್ದ ಈ ದಲಿತ ಸಾಹಿತ್ಯ ಹುಟ್ಟನ್ನೆ ಹೇಳಿಕೊಳ್ಳಲು ಅವಮಾನ ಪಡುತ್ತಿದ್ದ ವಿದ್ಯೆಯಿರದ ಹಾಗೂ ಹಲವಾರು ಅನಿಷ್ಠ ಪದ್ದತಿಗೆ ಒಳಗಾದ ಜನಾಂಗಕ್ಕೆ ಆ ಕಾಲದ ಅಕ್ಷರಕ್ರಾಂತಿಯ ಪ್ರೇರಣೆಯಿಂದ ತಮಗಾಗುತ್ತಿರುವ ಅನ್ಯಾಯದ ವಿರುದ್ಧ ಜಾಗೃತಿ ಉಂಟಾಯಿತು. ಸಿದ್ಧಲಿಂಗಯ್ಯ ಅವರ ಅಂತರಾತ್ಮದಲ್ಲಿ ಕ್ರಾಂತಿ ಭುಗಿಲೇಳಲು ಪ್ರೇರಣೆ ಸಿಕ್ಕಿದ್ದು ಎಲ್ಲಿಂದ? ಸ್ಮಶಾನದಲ್ಲಿ ಕೂತ ಈ ಪುಟ್ಟ ಕೃತಿ ಕೆಂಡದುಂಡೆಗಳಂಥ ಹಾಡುಗಳನ್ನು ಬರೆದಿದ್ದು ಕನ್ನಡದ ಇತಿಹಾಸವನ್ನೆ ಬದಲಿಸುವಂತ ಕಾವ್ಯ ಕ್ರಾಂತಿ ಸಾದಿಸಿದ್ದು ಹೇಗೆ? ಅವರ ಆತ್ಮಕಥೆ ಊರುಕೇರಿಯಲ್ಲಿ ಇದಕ್ಕೆ ಏನಾದರೂ ಸುಳಿವು ಸಿಕ್ಕಿತೆ ಎಂದು ನೋಡಿದರೆ ಅಲ್ಲಿ ಏನೂ ಇಲ್ಲ. ಹಾಗೆ ನೋಡಿದರೆ ಊರುಕೇರಿಯನ್ನು ಮೊದಲಬಾರಿ ಓದಿದಾಗಲೇ ನಿರಾಸೆಯಾಗಬಹುದು ಯಾವ ಯಾವ ಇಟ್ಟಿಗೆಗಳನ್ನು ಎಲ್ಲೆಲ್ಲಿಂದ ತಂದು ಸಿದ್ಧಲಿಂಗಯ್ನವರ ವ್ಯಕ್ತಿತ್ವದ ಕಟ್ಟಡ ಆಕಾರ ಪಡೆಯಿತು ಎಂಬ ಲವಲೇಶ ಸೂಚನೆಯು ಅಲ್ಲಿ ದೊರೆಯುವುದಿಲ್ಲ.

ಇನ್ನು ಇವರ ದಲಿತ ಅನುಭವದ ಲೋಕ ಕೂಡ ತೆಳು ಹಾಸ್ಯದ ಸಕ್ಕರೆ ಲೇಪ ಪಡೆದು ಬಂದಾಗ ಸ್ವಾರಸ್ಯದ ಪ್ರಸಂಗಗಳಾಗಿ ಪರ್ಯವಸನವಾಗಿವೆಯೇ ಹೊರತು ನಮ್ಮ ಸಾಮಾಜಿಕ ಸಂದರ್ಭದ ಕನ್ನಡಿಯಾಗಿ ಅಲ್ಲ. ದಲಿತನ ಸಿಟ್ಟಿನಿಂದ ಲೋಕ ಒಡೆದು ಹೋಗುವುದು ಕೊಂಚ ಅನುಮಾನದ ಸಂಗತಿ ಆದರೆ ಇಲ್ಲಿ ಅತ ಗೊಳ್ಳಂದು ನಗುವ ರೀತಿಗೆ ಲೋಕ ಬೆಚ್ಚಿ ಜಾರಿ ಬೀಳುವುದು ಖಾತ್ರಿ ಎನ್ನುವ ಡಿ.ಆರ್ ಹೇಳಿಕೆ ಊರುಕೇರಿಗೆ ಅನ್ವಯಿಸುವ ಮಾತಲ್ಲ ! ಏಕೆಂದರೆ ಇಂದಿಗೂ ಸಿದ್ಧಲಿಂಗಯ್ಯನವರ ಕ್ರಾಂತಿ ಗೀತೆಗಳು ಹೋರಾಟಗಾರರನ್ನು ಬಡಿದೆಬಿಸುತ್ತ ಲೋಕವನ್ನು ಬೆಚ್ಚಿ ಬೀಳಿಸಿವೆಯೇ ಹೊರತು ಅವರ ತೆಳು ಹಾಸ್ಯದ ಗದ್ಯವಲ್ಲ.

ಸಿದ್ದಲಿಂಗಯ್ಯನವರ ಕಾವ್ಯವನ್ನು ಕುರಿತು ಮೊಗಳ್ಳಿ ಗಣೇಶ ಅವರು "ನೊಂದವರ ನಾದ" ಎಂಬ ಲೇಖನದಲ್ಲಿ ತನ್ನವರ ಅನುಭವದ ಸಾರವನ್ನು ಸರಳವಾಗಿಯೇ ಆದರೆ ಅದ್ಭುತವಾಗಿಯೇ

ಮನಕರಗುವಂತೆ ಸಿದ್ದಲಿಂಗಯ್ಯನವರು ಕೆಲವೇ ರೂಪಕಗಳಲ್ಲಿ ಸಮುದಾಯದ ಒಟ್ಟು ಬದುಕನ್ನು ಬಿಂಬಿಸಿದ್ದಾರೆ. ಅಪ್ಪನ ಬೆವರಿನ ರಕ್ತವು ಸೋರಿ ಕೆಂಪಾದವು ಹೂವು, ಎಂಬ ಒಂದೇ ಒಂದು ಸಾಲು ಸಾಕು ಸಿದ್ದಲಿಂಗಯ್ಯನವರ ಆ ಸಾಲಿನ ಅನುಭವಕ್ಕೆ ಶತಮಾನಗಳ ಹೊರೆ ಇದೆ, ಅನಾದಿ ಕಾಲದ ಅಪಮಾನವಿದೆ ಶೋಷಣೆಯ ದೊಡ್ಡ ಇತಿಹಾಸವಿದೆ ಎಂದು ಸಾರಲು. ಸಿದ್ದಲಿಂಗಯ್ಯನವರ ಕಾವ್ಯಕ್ಕೆ ಅನಾದಿ ಕಾಲದ ಇತಿಹಾಸದ ಧ್ವನಿಯಿದ್ದು ನೊಂದವರ ಆಕ್ರಂದನವನ್ನು ಹಾಡಾಗಿಸಿ ಹೊಸ ಬಗೆಯ ಜೀವನವನ್ನು ನೀಡುತ್ತದೆ. ದಲಿತ ಸಮುದಾಯಗಳ ಆತ್ಮಕಥನಗಳೇ ರೂಪಕ,ಸಂಕೇತ,ಪ್ರತಿಮೆಗಳಾಗಿ ಸಿದ್ದಲಿಂಗಯ್ಯನವರ ಕಾವ್ಯಗಳಲ್ಲಿ ಚಾಚಿಕೊಂಡಿರುವುದನ್ನು ಕಾಣಬಹುದು. ಅಂಬೇಡ್ಕರ ವಾದದಿಂದ ಪ್ರೇರೆಪಿತರಾದ ಸಿದ್ದಲಿಂಗಯ್ಯನವರು ತನ್ನ ಕಾವ್ಯದಲ್ಲಿ ಅಂಬೇಡ್ಕರ ಅವರ ಪ್ರಸ್ತುತತೆ ಮತ್ತು ಇಲ್ಲದಿರುವಿಕೆಯನ್ನು ಚರ್ಚಿಸಿದ್ದಾರೆ, ದಲಿತ ಕವಿ ಎಂದೇ ಪ್ರಸಿದ್ದರಾದ ಸಿದ್ದಲಿಂಗಯ್ಯನವರು ದಲಿತ ಕವಿಗಳ ಪ್ರತಿನಿದಿಯಾಗಿದ್ದಾರೆ. ಧರ್ಮ ಮತ್ತು ಜಾತಿಯ ಹೆಸರಿನ ಕಟ್ಟುಪಾಡುಗಳಲ್ಲಿ ಬಂದಿತವಾಗಿರುವ ಕತ್ತಲೆ ಸಮಾಜದಿಂದ ಹೊರಬಂದು ಸಮಾನತೆ ಸ್ವಾತಂತ್ರ್ಯ ಮತ್ತು ಸ್ವಾಭಿಮಾನದ ಬೆಳಕಿನಲ್ಲಿ ತಮ್ಮ ಜೀವನವನ್ನು ಕಟ್ಟಿಕೊಳ್ಳುವುದೇ ಆಶಯ ಮತ್ತು ಉದ್ದೇಶವಾಗಿದೆ. ಕವಿ ಸಿದ್ದಲಿಂಗಯ್ಯನವರು ಶೋಷಿತರ ಪರ ಧ್ವನಿ ಎತ್ತುವ ಆಶಯಗಳಾದ ಅನ್ನ, ಹೆಣ್ಣಿನ ಸಮಾನತೆ, ನಡುರಾತ್ರಿಯಲ್ಲಿ ಸುತ್ತಾಡುವ ದೈರ್ಯ, ಅಧಿಕಾರದ ಹೆಸರಿನಲ್ಲಿ ಸಾಯಿಸುತ್ತಿರುವ ಜನರ ಸಾವು, ಕಷ್ಟಪಟ್ಟು ದುಡಿದು ಸುರಿಸುತ್ತಿರುವ ಬೆವರು, ಶೋಷಣೆಯಿಂದ ಬಳಲುತ್ತಿರುವ ಶೋಷಿತರ ನೋವು–ನಲಿವುಗಳು ಅವರ ಕಾವ್ಯ ಕವನಗಳ ಗಟ್ಟಿ ಧ್ವನಿಯಾಗಿವೆ.

ಸಿದ್ದಲಿಂಗಯ್ಯನವರ ಬರಹಗಳಲ್ಲಿ ಐತಿಹಾಸಿಕ ವ್ಯಕ್ತಿಗಳ ಚಿತ್ರಣ ಮತ್ತು ಅವರನ್ನು ಸಮಕಾಲೀನ ವ್ಯವಸ್ಥೆಗೆ ಪ್ರಸ್ತುತಪಡಿಸುವ ಮೂಲಕ ಅವರ ಚಿಂತನೆಯ ಅಗತ್ಯಗಳನ್ನು ಅವರ ಕವನಗಳಲ್ಲಿ ಪ್ರಚುರಪಡಿಸುವುದನ್ನು ಕಾಣಬಹುದು. ಅವರ ಕವನಗಳಲ್ಲಿ ಬುದ್ದ ಬಸವ ಅಂಬೇಡ್ಕರ ಮತ್ತು ಗಾಂಧೀಜಿಯವರ ಚಿಂತನೆ ಮತ್ತು ವ್ಯಕ್ತಿತ್ವದ ಮಹತ್ವಗಳನ್ನು ದಾಖಲಿಸುವ ಮೂಲಕ ಐತಿಹಾಸಿಕ ಪುರುಷರು ಎಂದಿಗೂ ಯಾವ ಕಾಲಕ್ಕೂ ಪ್ರಸ್ತುತ ಎನ್ನುವುದು ಅವರ ಬರಹಗಳಲ್ಲಿ ಕಂಡುಬರುತ್ತದೆ. ದಲಿತ ಚಳುವಳಿಯ ಮುನ್ನಡೆಗೆ ಸ್ಪೂರ್ತಿಯಾಗಿ ಸಿದ್ದಲಿಂಗಯ್ಯನವರ ಹಲವು ಕವನಗಳು ಪ್ರೇರಣೆಯಾಗಿವೆ. ಅವುಗಳಲ್ಲಿ ದಲಿತ ಚಳುವಳಿಯ ಸಂಘಟನೆಗೆ ಪ್ರೇರಣೆಯಾಗಿ ನಿಂತದ್ದು ಅಂಬೇಡ್ಕರ್ ಕ್ರಾಂತಿಗೀತೆ, ಮತ್ತು ಅಂಬೇಡ್ಕರ್ ಕವನಗಳು. ಅಕ್ಷರಸ್ಥರಿಗೆ ಮಾತ್ರ ಸೀಮಿತವಾಗಿದ್ದ ಅಂಬೇಡ್ಕರ್ ಅವರನ್ನು ಅನಕ್ಷರಸ್ಥ ಜನಸಾಮಾನ್ಯರಗೂ ತಲುಪಿಸುವಲ್ಲಿ ಈ ಗೀತೆಗಳು ವಹಿಸಿದ ಪಾತ್ರ ಪ್ರಮುಖವಾದದ್ದು. ಸಮಾಜದ ಸರಣಿಯಲ್ಲಿ ಮತ್ತು ಜಾಗೃತಿಯಲ್ಲಿ ಐತಿಹಾಸಿಕ ವ್ಯಕ್ತಿಗಳ

ISSN-2454-678X
ಸಂಪುಟ–5, ಸಂಚಿಕೆ–1, ಜನವರಿ 01, 2018 ರಿಂದ ಪೆಬ್ರುವರಿ 15, 2018

ಜೀವನ ಅವರ ತ್ಯಾಗ ಹೋರಾಟಗಳು ಎಂದೆಂದಿಗೂ ಜನಮಾನಸದಲ್ಲಿ ಸ್ಫೂರ್ತಿಯಾಗಿ ನಿಂತಿವೆ. ಸ್ವಾತಂತ್ರಾನಂತರದಲ್ಲಿ ಸರಕಾರಗಳು ದೇಶದ ಅನಕ್ಷರತೆಯನ್ನು ಹೋಗಲಾಡಿಸಲು ಅನುಸರಿಸಿದ ಶೈಕ್ಷಣಿಕ ನಿಲುವುಗಳು ಮತ್ತು ಅವರ ಪ್ರಯತ್ನದ ಕಾರಣವಾಗಿ ಶಿಕ್ಷಣ ಎನ್ನುವುದು ಕೇವಲ ಕೆಲವೇ ಸಮಾಜಕ್ಕೆ ಸೀಮಿತವಾಗಿರದೆ ಸಮಾಜದ ಕಟ್ಟ ಕಡೆಯ ವರ್ಗಕ್ಕೂ ಶಿಕ್ಷಣ ತಲುಪುವಂತೆ ಪ್ರೇರೆಪಿಸುವಲ್ಲಿ ಅಂಬೇಡ್ಕರ ಅವರನ್ನು ಕ್ರಾಂತಿಗೀತೆಯೊಂದಿಗೆ ಸಮ್ಮೋಹನಗೊಳಿಸಿ ಸಮಾಜದಲ್ಲಿ ಕ್ರಾಂತಿಯ ಕಹಳೆಯನ್ನು ಮೊಳಗಿಸುವ ಮೂಲಕ ಸಾಮಾಜಿಕ ಸಮಾನತೆ ಜಾತೀಯತೆಯ ವಿರುದ್ದದ ಹೋರಾಟದಲ್ಲಿ ತೊಡಗಿದವರ ಧ್ವನಿಗಳಿಗೆ ಸಿದ್ದಲಿಂಗಯ್ಯನವರು ತಮ್ಮ ಕವಿತೆಗಳ ಮೂಲಕ ಸ್ವರವಾದರು.

ಹೊಲೆಮಾದಿಗರ ಹಾಡಿನಲ್ಲಿ ಕವಿಗಳು ಅಂದಿನ ಸಾಮಾಜಿಕ ವ್ಯವಸ್ಥೆಯ ನೈಜತೆಯನ್ನು ಚಿತ್ರಿಸದೆ ಅವ್ಯವಸ್ಥೆಯ ವಿರುದ್ದ ಕ್ರಾಂತಿಯ ಮೊಳಗಿಸಿ ಅದರ ವಿರುದ್ದ ಬಹಿರಂಗವಾದ ಅಸಮಾಧಾನವನ್ನು ವ್ಯಕ್ತಪಡಿಸಿರವುದನ್ನು ನೋಡಬಹುದು. ಇವರ ಸಾಮಾಜಿಕ ಕಳಕಳಿ ಕೇವಲ ಕೃತಿ ರೂಪದಲ್ಲಿ ಮಾತ್ರವಾಗಿರದೇ ಸ್ವತಃ ತಾವೇ ಮುಂಚೂಣಿಯಾಗಿ ನಿಂತು ಹಲವು ರೀತಿಯ ಹೋರಾಟಗಳಲ್ಲಿ ಪಾಲ್ಗೊಳ್ಳುವ ಮೂಲಕ ಯುವ ಸಮೂಹಕ್ಕೆ ನಾಯಕರಾಗಿ ಮಾರ್ಗದರ್ಶಕರಾಗಿ ನಿಂತು ತಮ್ಮ ಅಸ್ತಿತ್ವದ ಪ್ರಶ್ನೆಗೆ ಉತ್ತರವೆಂಬಂತೆ ತಮ್ಮ ಬರಹಗಳಲ್ಲಿ ಕಾಣಿಸುತ್ತಾರೆ.

ಅವರ ಬರಹಗಳಲ್ಲಿ ಎಂತಹ ಗಟ್ಟಿ ಧ್ವನಿಯಿದೆ ಎಂಬುದನ್ನು ಈ ಕೆಳಗಿನ ಅವರ ಪ್ರಮುಖ ಕ್ರಾಂತಿಗೀತೆಯಾದ ನಲವತ್ತೇಳರ ಸ್ವಾತಂತ್ರ್ಯದಲ್ಲಿ ಕಾಣಬಹುದು.

**ಯಾರಿಗೆ ಬಂತು ಎಲ್ಲಿಗೆ ಬಂತು**
**ನಲವತ್ತೇಳರ ಸ್ವಾತಂತ್ರ್ಯ**
**ಟಾಟಾ ಬಿರ್ಲಾ ಜೋಬಿಗೆ ಬಂತು**
**ಜನಗಳ ತಿನ್ನುವ ಬಾಯಿಗೆ ಬಂತು**
**ಕೋಟ್ಯಾದೀಶನ ಕೋಣೆಗೆ ಬಂತು**
**ನಲವತ್ತೇಳರ ಸ್ವಾತಂತ್ರ್ಯ**

**ಸಾವಿರಾರು ಜನ ಗೋರಿಯಾದರು**
**ಲಕ್ಷ ಲಕ್ಷ ಜನ ಗಲ್ಲಿಗೇರಿದರು**

**ರೈತ ಕಾರ್ಮಿಕರು ರಕಗತವ ಕೊಟ್ಟರು**
**ಯಾರಿಗೆ ಬಂತು ಸ್ವಾತಂತ್ರ್ಯ**
**ನಲವತ್ತೇಳರ ಸ್ವಾತಂತ್ರ್ಯ**

**ಪೋಲಿಸರ ಬುಟ್ಟಿಗೆ ಬಂತು**
**ಮಾಲಿಕರ ಚಾಟಿಗೆ ಬಂತು**
**ಬಂತು ಕದ ಗುಂಡಿಗೆ ಬಂತು**
**ನಲವತ್ತೇಳರ ಸ್ವಾತಂತ್ರ್ಯ**

**ಪಾರ್ಲಿಮೆಂಟಿನ ಕುರ್ಚಿಯ ಮೇಲೆ**
**ವರ್ಷಗಟ್ಟಲೆ ಚರ್ಚೆಗೆ ಬಂತು**
**ಬಡವರ ಬೆವರು ರಕ್ತವ ಕುಡಿದು**
**ಹೇಳಲೇ ಇಲ್ಲ ಸ್ವಾತಂತ್ರ್ಯ**
**ನಲವತ್ತೇಳರ ಸ್ವಾತಂತ್ರ್ಯ**

ಸಿದ್ಧಲಿಂಗಯ್ಯ ಅವರು ರಾಮಕೃಷ್ಣ ಹೆಗಡೆಯವರ ಕಾಲದ ಎರಡು ಬಾರಿ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದರು, ಆಗಲೆ ಒಂದಷ್ಟು ಗೆಳೆಯರಿಗೆ ಇವರೇಕೆ ಅಧಿಕಾರದ ಹಿಂದೆ ಹೋದರು ಎಂದು ಇರಿಸುಮುರುಸಾಗಿದ್ದು ನಿಜ. ಮತ್ತು ಮುಂದಕ್ಕೆ ಅವರು ಹಲವಾರು ಅಧಿಕಾರ ಸ್ಥಾನಗಳನ್ನು ಒಂದಾದ ಮೆಲೋಂದು ಅಲಂಕರಿಸುತ್ತಾ ಹೋದರು ಸಿದ್ಧಲಿಂಗಯ್ಯ ಎಂದೂ ಭ್ರಷ್ಟರಾಗಿರಲಿಲ್ಲ, ಅವರು ಹಣ ಮಾಡಲಿಲ್ಲ. ಸಿದ್ಧಲಿಂಗಯ್ಯ ಅವರು ಎಲ್ಲಿದ್ದರು ದಲಿತರ ಹಿತವನ್ನು ಎಂದೂ ಮರೆಯಲಿಲ್ಲ ಎಂಬುದು ಶಿವಾಜಿಯವರ ವಿವರಣೆ.

ದಲಿತ ಬಂಡಾಯದ ಗಟ್ಟಿ ದ್ವನಿಯಾದ ಸಿದ್ಧಲಿಂಗಯ್ಯ ಅವರು ಕನ್ನಡ ದಲಿತ ಸಾಹಿತ್ಯದಲ್ಲಿ ತಮ್ಮದೆ ಆದ ಚಾಪು ಮೂಡಿಸಿ ಕವನ ಸಂಕಲನ, ವಿಮರ್ಶೆ, ನಾಟಕ, ಆತ್ಮಕಥೆಗಳ ಮೂಲಕ ಕನ್ನಡ ಸಾಹಿತ್ಯದಲ್ಲಿ ಮಿಂಚಿನ ಸಂಚಾರ ಮಾಡಿ ಪದ್ಮಶ್ರೀ, ನೃಪತುಂಗ, ನಾಡೋಜ, ಕರ್ನಾಟಕ ಸಾಹಿತ್ಯ ಅಕ್ಯಾಡಮಿ, ಕನ್ನಡ ರಾಜ್ಯೋತ್ಸವದಂತಹ ಅತ್ಯುನ್ನತ ಪ್ರಶಸ್ತಿಗಳನ್ನ ಮುಡಿಗೇರಿಸಿಕೋಂಡದ್ದು ತಮ್ಮ ಗಟ್ಟಿ ಬರಹದಿಂದಲೆ ಎಂಬುದು ಎದ್ದು ಕಾಣುತ್ತದೆ, ಇಷ್ಟು ಹೇಳಿದ ಮೇಲೆ ಸಿದ್ದಲಿಂಗಯ್ಯನವರನ್ನು

ಆಕ್ಷೇಪಿಸಲು ಮನಸ್ಸು ಬರುವುದಿಲ್ಲ, ಏಕೆಂದರೆ ದಲಿತ ಚಳುವಳಿಗೆ ಮತ್ತು ಕನ್ನಡ ಕಾವ್ಯ ಪರಂಪರೆಗೆ ಅವರು ಕೊಟ್ಟ ಕೊಡುಗೆ ಮರೆಯಲು ಸಾಧ್ಯವಿಲ್ಲ. ಸಿದ್ಧಲಿಂಗಯ್ಯ ಅವರು ವಿದ್ಯಾರ್ಥಿಗಳಿದ್ದಾಗಲೇ ಅಸಮಾನತೆಗಳ ಬಗ್ಗೆ ತಮ್ಮೊಳಗಿನ ಸಿಟ್ಟು ಆಕ್ರೋಶಗಳನ್ನು ವ್ಯಕ್ತಪಡಿಸಲು ಸಿದ್ಧಲಿಂಗಯ್ಯ ಅವರು ಆಯ್ದುಕೊಂಡದ್ದು ಕಾವ್ಯ ಮಾಧ್ಯಮ. ಒಟ್ಟಿನಲ್ಲಿ ನಾಡು ಕಂಡ ಶ್ರೇಷ್ಠ ಕವಿ ಸಿದ್ಧಲಿಂಗಯ್ಯ, ಸಿದ್ಧಲಿಂಗಯ್ಯ ಅವರು ನಿರಂತರವಾಗಿ ಹಲವಾರು ಸಾಮಾಜಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತ ಬಂದಿದ್ದು ಜಾನಪದ ಸಾಹಿತ್ಯ ಸಂಪಾದಕ ಮಂಡಳಿ, ಅಂಬೇಡ್ಕರ ಕೃತಿಗಳ ಕನ್ನಡ ಭಾಷಾಂತರ ಮತ್ತು ಸಂಪಾದನ ಸಮಿತಿ ಬಂಡಾಯ ಸಾಹಿತ್ಯ ಸಂಘಟನೆಗಳ ಸ್ಥಾಪಕ ಸದಸ್ಯರಾಗಿ ಪರಿಚಿತರಾಗಿದ್ದು ತಮ್ಮ ಗಟ್ಟಿ ಬರಹದಿಂದಲೆ ಎಂಬುದನ್ನು ಮರೆಯಲಾಗದು.

**ಪರಾಮರ್ಶನ ಗ್ರಂಥಗಳು:**

೧. **ಕನ್ನಡ ಸಾಹಿತ್ಯ ಚರಿತ್ರೆ** : ರಂ.ಶ್ರೀ.ಮುಗಳಿ ಉಷಾ ಸಾಹಿತ್ಯ ಮಾಲೆ ಮೈಸೂರು– 1999

೨. **ಕನ್ನಡ ಸಾಹಿತ್ಯ ಚರಿತ್ರೆ** : ತ.ಸು.ಶಾಮರಾಯ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಮೈಸೂರು–2001

೩. **ಕನ್ನಡ ಸಾಹಿತ್ಯ ಸಮೀಕ್ಷೆ** : ಜಿ.ಎಸ್.ಶಿವರುದ್ರಪ್ಪ ಬೆಂಗಳೂರು ವಿ.ವಿ. ಬೆಂಗಳೂರು –1974

೪. **ಡಾ.ಸಿದ್ದಲಿಂಗಯ್ಯನವರ ಸಮಗ್ರ ಸಾಹಿತ್ಯ ಸಂ–01** ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು–2018

೫. **ಡಾ.ಸಿದ್ದಲಿಂಗಯ್ಯನವರ ಸಮಗ್ರ ಸಾಹಿತ್ಯ ಸಂ–02** ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು–2018

೬. **ಬೋದಿವೃಕ್ಷದ ಕೆಳಗೆ ಸಮಗ್ರ ಕಾವ್ಯ :** ಸಿದ್ದಲಿಂಗಯ್ಯನವರ ಸಮಗ್ರ ಕಾವ್ಯ ಕಿ.ರಂ.ಪ್ರಕಾಶನ ಬೆಂಗಳೂರು– 2021

೭. **ಆಧುನಿಕ ಕನ್ನಡ ದಲಿತ ಸಾಹಿತ್ಯ ಸಂವೇದನೆ** : ಸಂ.ಪ್ರೊ.ಸಿ.ಬಿ.ಹೊನ್ನು ಸಿದ್ದಾರ್ಥ ಕನ್ನಡ ಅಧ್ಯಯನ ಕೇಂದ್ರ ಬೆಂವಿವಿ ಬೆಂಗಳೂರು.

೮. **ಊರುಕೇರಿ ಮತ್ತು ಸಾಮಜಿಕ ಪ್ರಜ್ಞೆ**: ಪ್ರೊ.ಅಜಿತ್ ಕುಮಾರ ಕಿ.ರಂ.ಪ್ರಕಾಶನ ಬೆಂಗಳೂರು–2019

೯. **ಕವಿ ನೆನಪು** : ಬೈರಮಮಗಲ ರಾಮೇಗೌಡ ಉಷಾ ಸಾಹಿತ್ಯ ಮಾಲೆ ಮೈಸೂರು –2021

೧೦. **ನೆನಪಿನ ಸಿದ್ದಲಿಂಗಯ್ಯ** : ಜೆ.ಪಿ.ಬಸವರಾಜ ಪರು ಪ್ರಕಾಶನ ಬೆಂಗಳೂರು–2021